ಕಥೆ

# ಯಾರಾದರು ಮುಂದುವರೆಸುವರೆಂದು

■ ಸ. ರಘುನಾಥ

'ಪರಿಮಳದಲ್ಲಿ ಮನೆ ಕಟ್ಟುವೆ, ನಿನಗಾಗಿ...'

ಪತ್ರ.

ಮೊದಲ ವಾಕ್ಯ ಓದುವಾಗಲೇ ಇದು ಹಗಲಿನಲ್ಲಿ ಓದುವುದಲ್ಲ, ರಾತ್ರಿ ಹಾಸಿಗೆಯಲ್ಲಿ ಮಲಗಿ ಓದುವ ಪತ್ರ ಅನ್ನಿಸಿತು. ಮುಂದಕ್ಕೆ ಓದಲಿಲ್ಲ. ಮನಸ್ಸು ಓದು ಓದೆಂದು ಪುಸಲಾಯಿಸುತ್ತಿತ್ತು. ಆದರೂ ಓದದೆ, ಇರದ ಕೆಲಸವನ್ನು ಇರುವಂತೆ ಮಾಡಿಕೊಂಡು ಹಗಲು ಕಳೆದೆ. ಸ್ವಲ್ಪ ಚಳಿ ಅನಿಸಿದರೂ ಪರವಾಗಿಲ್ಲವೆಂದು ಕಿಟಕಿಯ ಒಂದು ರೆಕ್ಕೆ ತೆರೆದೆ. ಗಾಳಿಗದು ಬಡಿದು ಮುಚ್ಚಿಕೊಳ್ಳದಂತೆ ಕೊಕ್ಕಿ ಸಿಕ್ಕಿಸಿದೆ.

ಹಾಸಿಕೊಂಡ ಹಾಸಿಗೆಗೆ ತೆಳುಕೆಂಗುಲಾಬಿ ರಂಗಿನ ಹೊದಿಕೆ. ಬೂರುಗದ ಹತ್ತಿಯ ದಿಂಬಿಗೂ ಅದೇ. ಅದರ ಪಕ್ಕ ಓದಿ ಮುಗಿಸಿ, ಕಪಾಟಿನಲ್ಲಿಡಲಿದ್ದ 'ಮೈಸೂರು ಮಲ್ಲಿಗೆ'ಯ ಹಳೆಯ ಪ್ರತಿ ಮತ್ತು 'ಮಲ್ಲಿಗೆ–ಮರುಗ' ಎಂಬ ಪ್ರೇಮಪತ್ರಗಳ ಪುಸ್ತಕ.

ಆ ಪತ್ರವನ್ನು ಮಲಗಿ ಓದುವುದೆ, ಕುಳಿತು ಓದುವುದೆ? ಕೊಂಚ ಹೊತ್ತಿನ ಗೊಂದಲ. ಮಲಗಿ ಓದುವುದು ಹಿತವೆನಿಸಿತು. ಹಿತವಾದುದನ್ನು ಹಿತವಾಗಿ ಓದಬೇಕು.

'ಪರಿಮಳದಲ್ಲಿ ಮನೆ ಕಟ್ಟುವೆ, ನಿನಗಾಗಿ. ಮಲಗೋ ಮನೆ ಬೆಳದಿಂಗಳ ಗೋಡೆಗಳದು. ಅಡುಗೆ ಮನೆಯಲ್ಲಿಡುವೆ, ದ್ರೌಪದಿಯ ಕೇಳಿ ಅಕ್ಷಯಪಾತ್ರೆ ತಂದು. ಹಾಲಿನ ಛಾವಣಿಗೆ ದೀಪ ನಕ್ಷತ್ರಗಳು. ದೇವರಮನೆಯೇಕೆ? ಮನೆ ತುಂಬ ನೀನಿರಲು ದೇವತೆಯಾಗಿ. ಮನೆ ಸುತ್ತ ತೋಟ. ಅದು ತ್ರಿಮೂರ್ತಿಗಳು ಸತಿಯರೊಡಗೂಡಿ ಹೂಚೆಂಡಾಟ ಆಡುತಿದ್ದಾಗ ಉದುರಿದ ಹೂಗಳಿಂದಾದ ತೋಟ. ಅಲ್ಲಿ ವಿಹರಿಸಲು ತಪಗೈದು ಮದನನಿಂದ ಪಡೆದ, ಗಿಳಿಗಳ ಹೂಡಿದ ರಥ. ಇರುಳು ಅಪ್ಸರೆಯರು, ದೇವಿಯರು ಬನಕೆ ಬರದಂತೆ ಕಾವಲಿಗೆ ಬಾವಲಿಗಳು...'

ಪ್ರೀತಿ, ಪ್ರೇಮಿಯ ಮನದಲ್ಲಿ ಇಷ್ಟು ರಮ್ಯತೆಯ ಸೃಜಿಸುವುದೆ! ಸೃಜಿಸದಿದ್ದರೆ ಹೀಗೆ ಬರೆಯುವುದೆಲ್ಲಿಂದ ಬರಬೇಕು? ಎಷ್ಟು ಸೊಗಸಾಗಿ ಹರಡಿರುವ ಭಾವನೆಗಳನ್ನು. ಇದು ಕನಸಿನಲಿ ಮೂಡಿತ್ತೆ? ರಮ್ಯ ಕಲ್ಪನೆಯೆ?

ಯಾವುದಾದರೇನು? ಅದರಲ್ಲಿನ ರಮ್ಯರೋಚಕತೆಯನ್ನು ಅನುಭವಿಸಬೇಕು, ಪ್ರೇಮಿಯಾಗಿ. ಅದು ಬಿಟ್ಟು ಜಿಜ್ಞಾಸೆ ತರವಲ್ಲ. ಭಾವನೆಗಳಿಗೆ ಸುಮುಖಿವಾಗಿ ಎದೆ ಸ್ಪಂದಿಸಬೇಕು. ಅದಕ್ಕೆ ಮನದಲ್ಲಿ ಕೋಮಲತೆಯನ್ನು ತುಂಬಿಕೊಳ್ಳಬೇಕು ಅಂದುಕೊಳ್ಳುವಾಗ, ರಮ್ಯತೆಯ ನಡುವೆ ಬಾವಲಿಯ ತಂದುದೇಕೆ? ಅನಿಸಿತು. ಅಪ್ಸರೆ, ದೇವಿಯರು ಬರುವುದು ಇರುಳಿನಲ್ಲಿ. ಆಗ ಸರಿಗಾವಲಿಗೆ ಬಾವಲಿಗಳೇ ಸರಿ. ಆಯ್ಕೆ ಸರಿ ಎನಿಸಿತು. ತ್ರಿಮೂರ್ತಿಗಳು ಸತಿಯರೊಡಗೂಡಿ ಹೂಚೆಂಡಾಟ ಆಡಲು ಅಲ್ಲಿ ಯಾವ ಹಬ್ಬ, ಉತ್ಸವವಿತ್ತು? ಈ ವಿಷಯಗಳಿಂದ ಮನಸ್ಸನ್ನು ಖಾಲಿ ಮಾಡಿಕೊಂಡು ಪತ್ರ ಓದತೊಡಗಿದೆ.

ಪರಿಮಳದಲ್ಲಿ ಮನೆ ಕಟ್ಟುವೆ, ನಿನಗಾಗಿ. ಮಲಗೋ ಮನೆ ಬೆಳದಿಂಗಳ ಗೋಡೆಗಳದು. ಅಡುಗೆ ಮನೆಯಲ್ಲಿರುಡುವೆ, ದ್ರೌಪದಿಯ ಕೇಳಿ ಅಕ್ಷಯಪಾತ್ರೆ ತಂದು. ಹಾಲಿನ ಛಾವಣಿಗೆ ದೀಪ ನಕ್ಷತ್ರಗಳು. ದೇವರಮನೆಯೇಕೆ? ಮನೆ ತುಂಬ ನೀನಿರಲು ದೇವತೆಯಾಗಿ. ಮನೆ ಸುತ್ತ ತೋಟ. ಅದು ತ್ರಿಮೂರ್ತಿಗಳು ಸತಿಯರೊಡಗೂಡಿ ಹೂ ಚೆಂಡಾಟವನಾಡುತಿರಲುದುರಿದ ಹೂಗಳಿಂದಾದ ತೋಟ. ಅಲ್ಲಿ ವಿಹರಿಸಲು ತಪಗೈದು ಮದನನಿಂದ ಪಡೆದ, ಗಿಳಿಗಳ ಹೂಡಿದ ರಥ. ಇರುಳು ಅಪ್ಸರೆಯರು, ದೇವಿಯರು ಬನಕೆ ಬರದಂತೆ ಕಾವಲಿಗೆ ಬಾವಲಿಗಳು...

ಅಕ್ಕರೆಯ ಓಲೆಗೆ ಸಮನಾದ ಓಲೆ ಬರೆಯದಿದ್ದರೆ ಹೇಗೆ? ಬರೆಯದಿದ್ದರೆ ಪೆಚ್ಚಾದಾನು, ಮುನಿದಾನು. ಅವನಿಗೆ ತೋಚಿದಂತೆ ನನಗೆ ತೋಚುತ್ತಿಲ್ಲ. ಮನದಲ್ಲಿ ಅವನಿರುವಾಗ ಹೇಗೆ ತೋಚೀತು? ತೋಚಲು ಅವನನ್ನು ಕೊಂಚ ಬದಿಗೆ ಸರಿಸಬೇಕು. ಅದು ಆದೀತೆ? ಅದಕ್ಕಾಗಿ ಸಮಯ ಮಾಡಿಕೊಂಡು ಪ್ರಯತ್ನಿಸಬೇಕು. ಆದೀತೆ?

ಪತ್ರದ ಒಂದೊಂದು ನುಡಿಯೂ ಭಾವಗೀತೆಯಾಗಿ ಹಿತಕೊಡುತ್ತಿದೆ. ಈ ಹಿತವನ್ನು ಅನುಭವಿಸುವಾಗ ಮಾತು ಎದೆಗೆ ಮೌನ ತಂದಿಟ್ಟು ಎಲ್ಲಿಗೋ ಹೋಗಿಬಿಟ್ಟಿರುತ್ತೆ. ಮೌನವನ್ನು ಅವನಿಗೆ ತಲುಪಿಸುವುದು ಹೇಗೆ? ಅವನೇ ಇದ್ದಿದ್ದರೆ ಒಂದು ಮುತ್ತು ನನ್ನ ಭಾವನೆಗಳನ್ನೆಲ್ಲ ಹೇಳಿಬಿಡುತ್ತಿತ್ತು, ಅವನೆದೆಗೆ. 'ನಿನ್ನ ಪತ್ರ ಹಿಡಿಸಿದ ಗುಂಗಿನಲ್ಲಿರುವೆ. ಈಗ ನಾನು ಮೂಕಿ' ಎಂದು ಬರೆಯಲೆ?

ಇನ್ನೊಮ್ಮೆ ಆ ಪತ್ರ ಓದಿದರೆ ಮನಸ್ಸು ಏನಾದರೂ ಹೇಳಬಹುದು. ಹೇಳಿದರೆ, ಹೇಳಿದ್ದನ್ನೇ ಬರೆಯಬಹುದೆಂದು ಓದಿದೆ. ಮನಸ್ಸಿಗೇನೋ ಅಮಲಿನ ಮಂಪರು. ಭಾವುಕತೆಯಲ್ಲಿ ಪ್ರೀತಿ ಮಂಕು ಹಿಡಿಸುವುದೆಂದು ತಿಳಿದಿದ್ದು ಈಗಲೇ.

